**ದಿನಾಂಕಃ 20.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ ಬಿ ಎಲ್ ರವರಿಂದಃ**

ದಾವಾಸ್ವತ್ತು ಸರ್ವೇ ನಂ.27/1 ರಲ್ಲಿ ಒಟ್ಟು 36 ಗುಂಟೆ ಇದ್ದು ಅದನ್ನು ತಿದ್ದುಪಡಿ ಮಾಡಿ 34 ಗುಂಟೆ ಎಂದು ಮಾಡಿರುತ್ತಾರೆ. ಮೂಲ ಪಂಚಾಯತ್ ಪಾರಿಕತ್ ನಲ್ಲಿ 36 ಗುಂಟೆ ವಿಸ್ತೀರ್ಣ ನಮೂದು ಇದ್ದು, ಸದರಿ ದಾಖಲೆಯ ಜೆರಾಕ್ಸ ಪ್ರತಿಗಳಲ್ಲಿ ವೈಟ್‌ನರ್ ಬಳಸಿ 34 ಗುಂಟೆ ಎಂದು ತಿದ್ದುಪಡಿ ಮಾಡಿರುತ್ತಾರೆ. ಪಂಚಾಯತ್ ಪಾರಿಕತ್ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. 1994 ರಲ್ಲಿ 6 ಜನ ಅಣ್ಣ-ತಮ್ಮಂದಿರ ನಡುವೆ ಸದರಿ ದಾಖಲೆಯಲ್ಲಿ ಮಾಡಲಾಗಿದ್ದು, ಅದರಲ್ಲಿರುವ ಬಿ ಅನುಸೂಚಿ ಸ್ವತ್ತು ನನ್ನ ತಂದೆಯ ಪಾಲಿಗೆ ಬಂದಿರುತ್ತದೆ. ಪಂಚಾಯತ್ ಪಾರಿಕತ್ ನಡೆದ ಸಮಯದಲ್ಲಿ ನಾನು 10 ವರ್ಷದ ಮಗುವಾಗಿದ್ದು, ಆಗ ನಮ್ಮ ಕುಟುಂಬದಲ್ಲಿ ಒಟ್ಟು ಎಷ್ಟೇ ಸ್ವತ್ತುಗಳು ಇದ್ದವು ಎಂದು ಗೊತ್ತಿರುವುದಿಲ್ಲ.

ಎ ಅನುಸೂಚಿಯಲ್ಲಿ ಒಟ್ಟು ಎಷ್ಟು ಸ್ವತ್ತುಗಳು ಇದ್ದವು ಎಂದು ಗೊತ್ತಿರುವುದಿಲ್ಲ. ಸದರಿ ಅನುಸೂಚಿಯಲ್ಲಿರುವ ಸ್ವತ್ತುಗಳು ನನ್ನ ದೊಡ್ಡಪ್ಪರಾದ ಎನ್ ಚಿಕ್ಕಣ್ಣಯ್ಯ ರವರ ಹೆಸರಿಗೆ ಬಂದಿರುತ್ತದೆ. ಪೂರ್ವಕ್ಕೆಃ ಗುಂಗಟ ರಾಮಯ್ಯ, ಪಶ್ಚಿಮಕ್ಕೆಃ ಎನ್ ಶ್ರೀನಿವಾಸ ರವರ ಸ್ವತ್ತು, ಉತ್ತರಕ್ಕೆಃ ಸುಮಾರು 8 ರಿಂದ 10 ಅಡಿ ರಸ್ತೆ ಹಾಗೂ ದಕ್ಷಿಣಕ್ಕೆ ಶಿವಕುಮಾರ ರವರ ಸ್ವತ್ತು.

ಬಿ ಅನುಸೂಚಿಯ 36 ಗುಂಟೆ ವಿಸ್ತೀರ್ಣ ಜಮೀನು ಹಾಗೂ 40x23 ½ ವಿಸ್ತೀರ್ಣದ ಜಾಗ ಇರುತ್ತದೆ. ಪ್ರತಿವಾದಿಯ ಪಾಲಿಗೆ ಡಿ ಅಥವಾ ಇ ಅನುಸೂಚಿ ಸ್ವತ್ತು ಹೋಗಿರಬಹುದು. ಪ್ರತಿವಾದಿಯ ಹೆಸರಿಗೆ ಸ್ವತ್ತು ಪಂಚಾಯತ್ ಪಾರಿಕರ್ ಆಧಾರದ ಮೇಲೆ ಬಂದಿರುತ್ತದೆ. ಪ್ರತಿವಾದಿಯ 2013 ರಲ್ಲಿ ನನ್ನ ತಂದೆಯ ಹೆಸರಿಗೆ ಹಕ್ಕು ನಿವೃತ್ತಿ ಪತ್ರವನ್ನು ಮಾಡಿಕೊಟ್ಟಿರುತ್ತಾರೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ಸರ್ವೇ ನಂ.27/1 ರಲ್ಲಿ ನನ್ನ ಚಿಕ್ಕಪ್ಪರವರಾದ ಪ್ರತಿವಾದಿಯು ಸ್ವಾಧೀನದಲ್ಲಿರುತ್ತಾರೆ. ಅವರು ಸದರಿ ಸ್ವತ್ತನ್ನು ಎಷ್ಟು ಜನರಿಗೆ ಮಾರಾಟ ಮಾಡಿರುತ್ತಾರೆಂದು ಗೊತ್ತಿರುವುದಿಲ್ಲ. ಪ್ರತಿವಾದಿಯು ಮಾರಾಟ ಮಾಡಿದ ಜಾಗವನ್ನು 2 ಮನೆಗಳನ್ನು ಕಟ್ಟಿರುತ್ತಾರೆ. ಅವರು ಕಟ್ಟಿಕೊಂಡಂತಹ ಮನೆಗಳು ದಾವಾಸ್ವತ್ತಿನ ಚೆಕ್ಕು ಬಂದಿಯ ಒಳಗೆ ಬರುತ್ತವೆಂದರೆ ಸರಿ. ಮಾರಾಟ ಮಾಡಿ ಉಳಿದಂತಹ ಸ್ವತ್ತಿನಲ್ಲಿ ಪ್ರತಿವಾದಿಯೆ ಸ್ವಾಧೀನದಲ್ಲಿರುತ್ತಾರೆಂದರೆ ಸರಿ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು**.

**(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ದೊಡ್ಡಬಳ್ಳಾಪುರ.**